## 9. ನಾನೆಂದೂ ಮರೆಯದ ನಾಯಕ ರಾಮಕೃಷ್ಣ ಹೆಗಡೆ

ಕರ್ನಾಟಕದ ಮುಖ್ಯಮಂತ್ರಿಗಳಲ್ಲಿ ರಾಮಕೃಷ್ಣ ಹೆಗಡೆಯವರು ತಮ್ಮ ಪ್ರತಿಭೆ ಮತ್ತು ಸಾಧನೆಗಳಿಂದ ಮಾತ್ರವಲ್ಲ ವರ್ಣರಂಜಿತ ವ್ಯಕ್ತಿತ್ವಗಳಿಂದಲೂ ವಿಶೇಷ ಸ್ಥಾನ ಗಳಿಸಿಕೊಂಡವರು. ಕಾಂಗ್ರೆಸ್ ಪಕ್ಷದಿಂದ ಪ್ರಾರಂಭಗೊಂಡ ಅವರ ರಾಜಕೀಯ ಜೀವನ ಭಾರತೀಯ ಜನತಾ ಪಕ್ಷದ ಜೊತೆಗಿನ ಮೈತ್ರಿಯೊಂದಿಗೆ ಬೀಳುಗಳನ್ನು ಕಂಡರೂ ಕೊನೆ ದಿನದವರೆಗೂ ಅವರ ಮುಖದಲ್ಲಿನ ಮಂದಹಾಸ ಮರೆಯಾಗಿರಲಿಲ್ಲ.

ಉತ್ತರ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿದ್ದ, ರಾಮಕೃಷ್ಣ ಹೆಗಡೆಯವರು ತನ್ನ ಹದಿವಯಸ್ಸಿನಲ್ಲಿಯೇ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದವರು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡಿದ್ದ ಹೆಗಡೆಯವರು ಸ್ವಾತಂತ್ರ್ಯಾ ನಂತರ ಸಹಜವಾಗಿಯೇ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡಿದ್ದರು.

1957ರಲ್ಲಿ ಕಾಂಗ್ರೆಸ್ ಪಕ್ಷದಿಂದಲೇ ಶಾಸಕರಾಗಿದ್ದ ಹೆಗಡೆಯವರು ನಂತರ ಎಸ್.ನಿಜಲಿಂಗಪ್ಪ ಮತ್ತು ವೀರೇಂದ್ರ ಪಾಟೀಲ್ ಸಂಪುಟದಲ್ಲಿ ಸಚಿವರೂ ಆಗಿದ್ದರು. ನಿಜಲಿಂಗಪ್ಪನವರ ಕಾಲದಲ್ಲಿ ಹೆಗಡೆ ಮತ್ತು ಪಾಟೀಲರು ಲವ-ಕುಶರೆಂದೇ ಜನಪ್ರಿಯರಾಗಿದ್ದರು. 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಹೆಗಡೆಯವರು ಕಾಂಗ್ರೆಸ್(ಓ) ಸೇರಿಕೊಂಡರು.

ಕೊನೆಗೂ ಅವರು ರಾಜ್ಯದ ಮುಖ್ಯಮಂತ್ರಿಯಾಗಲು 1983ರವರೆಗೆ ಕಾಯಬೇಕಾಯಿತು. ಆ ಚುನಾವಣೆಯಲ್ಲಿ ರಾಜ್ಯದಲ್ಲಿ ಮೊದಲ ಬಾರಿ ಕಾಂಗ್ರೆಸ್ ಪಕ್ಷ ಪರಾಭವಗೊಂಡಿತ್ತು. ಜನತಾ ಪಕ್ಷ ಮತ್ತು ಕ್ರಾಂತಿರಂಗ ಪಕ್ಷಗಳು ಸೇರಿ ಸರಕಾರ ರಚನೆಯ ಪ್ರಯತ್ನ ಮಾಡುತ್ತಿದ್ದಾಗ ಎಚ್.ಡಿ.ದೇವೇಗೌಡ, ಎಸ್.ಬಂಗಾರಪ್ಪ, ಎಸ್.ಆರ್.ಬೊಮ್ಮಾಯಿ ಮೊದಲಾದವರು ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗಿದ್ದರು. ಇವರ ನಡುವಿನ ತಿಕ್ಕಾಟದಲ್ಲಿ ರಾಮಕೃಷ್ಣ ಹೆಗಡೆಯವರಿಗೆ ಮುಖ್ಯಮಂತ್ರಿಯಾಗುವ ಅವಕಾಶ ಕೂಡಿ ಬಂತು. ಹೆಗಡೆಯವರು ಆಕಸ್ಮಿಕವಾಗಿ ಮುಖ್ಯಮಂತ್ರಿಯಾದರೂ, ಆ ಸ್ಥಾನದಲ್ಲಿದ್ದ ಐದು ವರ್ಷಗಳ ಅವಧಿಯಲ್ಲಿ ಶಾಶ್ವತವಾದ ಛಾಪನ್ನು ಒತ್ತಿಹೋದರು. ಕಾಂಗ್ರೆಸ್ಸೇತರ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾದರು.

ರಾಮಕೃಷ್ಣ ಹೆಗಡೆಯವರು ನನಗೆ ಗೊತ್ತಿದ್ದರೂ ಆತ್ಮೀಯವಾದ ಸ್ನೇಹ ಇರಲಿಲ್ಲ. ನಾನು 1983ರಲ್ಲಿ ನಾನು ಚಾಮುಂಡೇಶ್ವರಿ ಕ್ಷೇತ್ರದಿಂದ ಮೊದಲ ಬಾರಿ ವಿಧಾನಸಭೆಗೆ ಪಕ್ಷೇತರನಾಗಿ ಆಯ್ಕೆಯಾದವನು. ಜನತಾರಂಗ ಸರಕಾರ ರಚಿಸಿದ್ದರೂ ಅದಕ್ಕೆ ಸ್ಪಷ್ಟ ಬಹುಮತ ಇರಲಿಲ್ಲ. ಬಿಜೆಪಿ ಮತ್ತಿತರ ಕಾಂಗ್ರೆಸ್ಸೇತರ ಶಾಸಕರ ಬೆಂಬಲವನ್ನು ಹೆಗಡೆಯವರು ಪಡೆದಿದ್ದರು. ಆಗ ನಾನೂ ಸರಕಾರವನ್ನು ಬೇಷರತ್ ಆಗಿ ಬೆಂಬಲಿಸಿದ್ದೆ. ಬಳಿಕ ಜನತಾಪಕ್ಷ ಸೇರಿದೆ.

ನಾನೇನೂ ಹುದ್ದೆ-ಪದವಿಗಳ ಷರತ್ತು ಹಾಕಿ ಬೆಂಬಲ ನೀಡಿದವನಲ್ಲ. ಆದರೆ, ಹೆಗಡೆಯವರಿಗೆ ಪ್ರಾರಂಭದಿಂದಲೂ ನನ್ನ ಬಗ್ಗೆ ವಿಶೇಷವಾದ ಪ್ರೀತಿ-ಅಭಿಮಾನ ಇತ್ತು. ಇದರಿಂದಾಗಿಯೇ ಏನೋ ಅವರು ನನ್ನನ್ನು ಕರೆದು ರಾಜ್ಯದಲ್ಲಿ ಮೊದಲ ಬಾರಿಗೆ ರಚನೆಯಾಗಿದ್ದ ಕನ್ನಡ ಕಾವಲು ಸಮಿತಿ ಅಧ್ಯಕ್ಷ ಸ್ಥಾನದ ಜವಾಬ್ದಾರಿ ಕೊಟ್ಟರು.

ಬಳಿಕ 1984ರ ಆಗಸ್ಟ್ ತಿಂಗಳಲ್ಲಿ ರೇಷ್ಮೆ ಸಚಿವ ಸ್ಥಾನ ನೀಡಿದರು. 1985ರಲ್ಲಿ ವಿಧಾನಸಭೆಗೆ ಮತ್ತೆ ಆಯ್ಕೆಯಾಗಿ ಬಂದಾಗ ಪಶು ಸಂಗೋಪನಾ ಸಚಿವ ಸ್ಥಾನದ ಹೊಣೆಗಾರಿಕೆಯನ್ನು ನನಗೆ ಹೆಗಡೆಯವರು ವಹಿಸಿದರು. ಟೆಲಿಫೋನ್ ಕದ್ದಾಲಿಕೆ ಹಗರಣದ ಹಿನ್ನೆಲೆಯಲ್ಲಿ ಹೆಗಡೆಯವರು ರಾಜೀನಾಮೆ ನೀಡಿದ ಬಳಿಕ ಎಸ್.ಆರ್.ಬೊಮ್ಮಾಯಿಯವರು ಮುಖ್ಯಮಂತ್ರಿಯಾದರು. ಅವರ ಸಂಪುಟದಲ್ಲಿ ನಾನು ಸಾರಿಗೆ ಸಚಿವನಾಗಿ ಕಾರ್ಯನಿರ್ವಹಿಸಿದ್ದೆ. ರಾಮಕೃಷ್ಣ ಹೆಗಡೆಯವರು ಬನಾರಸ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದವರು. ನಂತರ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿ ಗಳಿಸಿದವರು. ಹೀಗಿದ್ದರೂ ಕನ್ನಡ ಭಾಷೆಯ ಬಗ್ಗೆ ಅವರಿಗಿದ್ದ ಬದ್ಧತೆ ಮತ್ತು ಅಭಿಮಾನ ರಾಜಿ ಇಲ್ಲದ್ದು. ನನಗೆ ತಿಳಿದ ಹಾಗೆ ಇಂದಿಗೂ ಬೇರೆ ರಾಜ್ಯಗಳಲ್ಲಿ ಅಲ್ಲಿನ ಭಾಷೆಯ ರಕ್ಷಣೆ ಮತ್ತು ಪೋಷಣೆಗಾಗಿ ಪ್ರತ್ಯೇಕವಾದ ಸಂಸ್ಥೆಗಳಿಲ್ಲ.

ಹೆಗಡೆಯವರು ಕೇವಲ ಕನ್ನಡ ಕಾವಲು ಸಮಿತಿಯನ್ನು ಮಾತ್ರವಲ್ಲ, ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಗಡಿ ಸಲಹಾ ಸಮಿತಿಯನ್ನು ರಚಿಸಿದ್ದರು. ಕೇಂದ್ರ ಸರಕಾರದ ಸ್ವಾಮ್ಯದ

ಉದ್ದಿಮೆಗಳು ಮತ್ತು ಬ್ಯಾಂಕುಗಳಲ್ಲಿ ಉದ್ಯೋಗದಲ್ಲಿರುವ ಕನ್ನಡಿಗರ ಸಮೀಕ್ಷೆ ನಡೆಸಿ ಸ್ಥಳೀಯರಿಗೆ ಉದ್ಯೋಗ ನೀಡುವ ಬಗ್ಗೆ ಶಿಫಾರಸ್ಸು ಮಾಡಲು ಸರೋಜಿನಿ ಮಹಿಷಿ ಸಮಿತಿಯನ್ನು ಕೂಡಾ ರಚಿಸಿದವರು ರಾಮಕೃಷ್ಣ ಹೆಗಡೆಯವರು. ನಾಡಿನ ಮಾತ್ರವಲ್ಲ ದೇಶದ ಸಾಹಿತಿಗಳು, ಚಿಂತಕರು ಮತ್ತು ಪತ್ರಕರ್ತರ ಜೊತೆಗೆ ಅವರ ಒಡನಾಟದಿಂದಾಗಿ ಅವರೊಬ್ಬ ಬುದ್ದಿಜೀವಿ ರಾಜಕಾರಣಿ ಎಂಬ ಖ್ಯಾತಿ ಗಳಿಸಿದ್ದರು.

ರಾಮಕೃಷ್ಣ ಹೆಗಡೆಯವರು ಅತ್ಯಂತ ಚಾಣಾಕ್ಷ ರಾಜಕಾರಣಿ ಎಂಬುದರ ಬಗ್ಗೆ ಎರಡು ಮಾತಿಲ್ಲ. 1983ರಿಂದ 1985ರವರೆಗಿನ ಅವಧಿಯ ಅವರ ಮುಖ್ಯಮಂತ್ರಿ ಅವಧಿ ತಂತಿಯ ಮೇಲಿನ ನಡಿಗೆ. ಬಾಹ್ಯ ಬೆಂಬಲ ನೀಡುತ್ತಿದ್ದ ಬಿಜೆಪಿ ಶಾಸಕರ ಬ್ಲಾಕ್ ಮೇಲ್ ನಡವಳಿಕೆಯಿಂದ ಅವರು ಬೇಸತ್ತು ಹೋಗಿದ್ದರು. 1985ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಜನತಾದಳ ದಯನೀಯವಾಗಿ ಸೋಲು ಕಂಡಿತ್ತು. ಅದೇ ಅವಕಾಶವನ್ನು ಬಳಸಿಕೊಂಡ ಹೆಗಡೆಯವರು ವಿಧಾನಸಭೆಗೆ ಮಧ್ಯಂತರ ಚುನಾವಣೆ ಘೋಷಿಸಿಬಿಟ್ಟರು. ಈ ರೀತಿ ಲೋಕಸಭಾ ಚುನಾವಣೆಯಲ್ಲಿನ ಸೋಲಿಗಾಗಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಪಕ್ಷ ವಿಧಾನಸಭೆಯನ್ನು ವಿಸರ್ಜನೆಗೊಳಿಸಿ ಚುನಾವಣೆ ಎದುರಿಸುವ ನಿರ್ಧಾರ ಕೈಗೊಳ್ಳುವುದು ಬಹುಶಃ ದೇಶದ ರಾಜಕೀಯ ಇತಿಹಾಸದಲ್ಲಿಯೇ ಮೊದಲು. ಆದರೆ ರಾಜ್ಯದ ಪ್ರಜ್ಞಾವಂತ ಮತದಾರರು ಹೆಗಡೆಯವರ ನಿರೀಕ್ಷೆಯನ್ನು ಹುಸಿ ಮಾಡಲಿಲ್ಲ. ಎರಡು ವರ್ಷಗಳ ಜನತಾರಂಗದ ಆಡಳಿತವನ್ನು ನೋಡಿದ್ದ ರಾಜ್ಯದ ಜನತೆ ಪೂರ್ಣ ಬಹುಮತದೊಂದಿಗೆ ಮರಳಿ ಅಧಿಕಾರಕ್ಕೆ ತಂದರು.

ನಾನು ಕಂಡಂತೆ ರಾಮಕೃಷ್ಣ ಹೆಗಡೆಯವರು ಒಬ್ಬ ಅಪ್ಪಟ ಪ್ರಜಾಪ್ರಭುತ್ವವಾದಿಗಳಾಗಿದ್ದರು. ಒಬ್ಬ ಮುಖ್ಯಮಂತ್ರಿಯಾಗಿ ಸಂಪುಟದ ಸದಸ್ಯರಿಗೆ ತಮ್ಮ ತಮ್ಮ ಖಾತೆಗಳಲ್ಲಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಮುಕ್ತ ಅವಕಾಶವನ್ನು ನೀಡಿದ್ದರು. ಅವರೆಂದೂ ಇತರ ಸಚಿವ ಖಾತೆಗಳಲ್ಲಿ ಅನಗತ್ಯವಾಗಿ ಮೂಗು ತೂರಿಸಲು ಬರುತ್ತಿರಲಿಲ್ಲ.

ರಾಮಕೃಷ್ಣ ಹೆಗಡೆಯವರಲ್ಲಿ ಒಬ್ಬ ದೂರದೃಷ್ಟಿಯ ನಾಯಕನಿದ್ದ. ಅವರು ರಾಜ್ಯದಲ್ಲಿ ಜಾರಿಗೆ ತಂದಿರುವ ಕ್ರಾಂತಿಕಾರಿ ಪಂಚಾಯತ್ ರಾಜ್ ವ್ಯವಸ್ಥೆಯೇ ಇದಕ್ಕೆ ಸಾಕ್ಷಿ. ಅವುಗಳಿಗೆ ಸ್ವಾವಲಂಬಿ ಮತ್ತು ಸ್ವಾಯತ್ತ ಸ್ವರೂಪ ನೀಡುವ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್‌ಗಳ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಲು ಹೆಗಡೆಯವರಿಗೆ ಸಚಿವ ಅಬ್ದುಲ್ ನಜೀರ್ ಸಾಬ್ ಅವರು ಸಂಪೂರ್ಣ ಬೆಂಬಲ ನೀಡಿದ್ದರು. ಸಂಪುಟದಲ್ಲಿ ಈ ಬಗ್ಗೆ ವಿರೋಧ ಇದ್ದರೂ ಹೆಗಡೆಯವರ ಬದ್ಧತೆಯ ಕಾರಣದಿಂದಾಗಿ ಮತ್ತು ನಜೀರ್ ಸಾಬ್ ಅವರು ಕೈಜೋಡಿಸಿದ್ದರಿಂದಾಗಿ ಅದು ಸಾಧ್ಯವಾಗಿತ್ತು.

ಕೊಳವೆಬಾವಿಗಳ ಯುಗ ಆರಂಭವಾಗಿದ್ದು ಹೆಗಡೆಯವರ ಕಾಲದಲ್ಲಿಯೇ. ಕೊಳವೆಬಾವಿಗಳನ್ನು ಕೊರೆಸಿ ಹಳ್ಳಿ ಹಳ್ಳಿಗಳಿಗೂ ನೀರು ಸಿಗುವಂತೆ ಮಾಡಿದ್ದು ಹೆಗಡೆಯವರ ಸರ್ಕಾರದ ಅವಧಿಯಲ್ಲೇ. ಇದಕ್ಕಾಗಿಯೇ ನಜೀರ್ ಸಾಬ್ ಅವರನ್ನು ಜನ ನೀರ್ ಸಾಬ್ ಎಂದು ಅಭಿಮಾನದಿಂದ ಕರೆಯವಂತಾಯಿತು.

ಟೆಲಿಫೋನ್ ಕದ್ದಾಲಿಕೆಯ ಆರೋಪದಿಂದಾಗಿ 1988ರಲ್ಲಿ ಹೆಗಡೆಯವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಅದರ ನಂತರ ರಾಮಕೃಷ್ಣ ಹೆಗಡೆಯವರ ರಾಜಕೀಯ ಜೀವನ ಅನೇಕ ತಿರುವುಗಳನ್ನು ಪಡೆದುಹೋಯಿತು. ರಾಜಕೀಯ ಭಿನ್ನಾಭಿಪ್ರಾಯಗಳು ತಾರಕಕ್ಕೇರಿ ಕೊನೆಗೆ ಜನತಾ ಪಕ್ಷದಿಂದಲೇ ಹೆಗಡೆಯವರನ್ನು ಉಚ್ಚಾಟಿಸಲಾಯಿತು. ಆ ಸಂದರ್ಭದಲ್ಲಿ ಎಲ್ಲ ನಾಯಕರೂ ಹೆಚ್ಚು ಉದಾರ ಮನೋಭಾವದಿಂದ ನಡೆದುಕೊಳ್ಳಬೇಕಿತ್ತೆಂದು ನನ್ನ ಅಭಿಪ್ರಾಯವಾಗಿತ್ತು. ಜನತಾ ಪರಿವಾರದ ಎಲ್ಲ ನಾಯಕರೂ ಹೊಂದಾಣಿಕೆಯಿಂದ ಹೋಗಿದ್ದರೆ ರಾಜ್ಯದ ರಾಜಕೀಯ ಬೇರೆಯೇ ಹಾದಿ ಹಿಡಿಯುತ್ತಿತ್ತೋ ಏನೋ? ಸೈದ್ಧಾಂತಿಕವಾಗಿ ಭಾರತೀಯ ಜನತಾ ಪಕ್ಷವನ್ನು ವಿರೋಧಿಸುತ್ತಲೇ ಬಂದಿದ್ದ ರಾಮಕೃಷ್ಣ ಹೆಗಡೆಯವರು ಕೊನೆಗೆ ಅದೇ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳುವಂತಾಯಿತು.

ಮೊದಲು ನವನಿರ್ಮಾಣ ವೇದಿಕೆಯನ್ನು ಕಟ್ಟಿ ನಂತರ ಅದನ್ನು ಲೋಕಶಕ್ತಿ ಎಂಬ ರಾಜಕೀಯ ಪಕ್ಷವನ್ನಾಗಿ ಮಾಡಿಕೊಂಡ ಹೆಗಡೆಯವರು 1998ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡರು. ವಾಜಪೇಯಿ ಸರಕಾರದಲ್ಲಿ ಸಚಿವರೂ ಆಗಿಬಿಟ್ಟರು. ಜನತಾಪಕ್ಷ ತೊರೆದ ನಂತರ ಹೆಗಡೆಯವರ ಜತೆಗೆ ರಾಜಕೀಯ ಸಂಬಂಧ ಇಲ್ಲದೇ ಇದ್ದರೂ ವೈಯುಕ್ತಿಕ ಸಂಬಂಧ ಸೌಹರ್ದಯುತವಾಗಿತ್ತು. ಕೊನೆಯವರೆಗೂ ನನ್ನ ಬಗ್ಗೆ ಅವರಿಗೆ ವಿಶೇಷವಾದ ಅಭಿಮಾನವೂ ಇತ್ತು. ಹೆಗಡೆಯವರು ಜನಪ್ರಿಯ ನಾಯಕರು ಮಾತ್ರವಲ್ಲ, ಜನಪರ ಕಾಳಜಿ ಹೊಂದಿದ್ದ ದಕ್ಷ ಹಾಗೂ ಒಳ್ಳೆಯ ಆಡಳಿತಗಾರರೂ ಆಗಿದ್ದರು. ನನ್ನ

ರಾಜಕೀಯ ಜೀವನದ ಪ್ರಾರಂಭದ ದಿನಗಳಲ್ಲಿ ಅವಕಾಶ ನೀಡಿ ಬೆಳೆಸಿದ ರಾಮಕೃಷ್ಣ ಹೆಗಡೆಯವರು ನಾನೆಂದೂ ಮರೆಯದ ನಾಯಕ.

**ಲೇಖಕರು:ಸಿದ್ದರಾಮಯ್ಯ,**
**ವಿಧಾನ ಸಭೆಯ ಪ್ರತಿಪಕ್ಷದ ನಾಯಕರು**
**ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:29.08.2020**